**ಸಿ.ಸಿ.ನಂ.: 2241/2025**

ಪಿ.ಡಬ್ಲ್ಯೂ: 1

(ಇಂದು ದಿನಾಂಕಃ **14-05-2026** ರಂದು ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲು –ಆರೋಪಿ ಪರ ಶ್ರೀ ಎಸ್ ಎಮ್ ಎನ್ ವಕೀಲರಿಂದ**

1. ಈ ಪ್ರಕರಣದ ಸಾಲವನ್ನು ನಾವು ಸಾಲಗಾರರಿಗೆ ಖಾತೆಯ ಮುಖಾಂತರ ನೀಡಿದ್ದು, ಆತನು ಯಾವ ಖಾತೆಗೆ ಹಾಕಿದ್ದೇವೆ ಎಂಬ ಬಗ್ಗೆ ನನಗೆ ನೆನಪಿಲ್ಲ. ಈ ಪ್ರಕರಣದ ಸಾಲವನ್ನು ನೀಡುವ ಸಂದರ್ಭದಲ್ಲಿ ಭದ್ರತೆಗಾಗಿ ಪಡಿತರ ಚೀಟಿ ಹಾಗೂ ಮನೆ ತೇರಿಗೆ ಪಾವತಿ ರಶೀದಿಯನ್ನು ಪಡೆದುಕೊಂಡಿರುತ್ತೇವೆ. ಸಾಲವನ್ನು ಪಡೆದ ನಂತರದಲ್ಲಿ ಸಾಲಗಾರರು ಯಾವುದೇ ಸಾಲದ ಮೊತ್ತವನ್ನು ಮರು ಪಾವತಿ ಮಾಡಿರುವುದಿಲ್ಲ. ಸಾಲವನ್ನು ನೀಡುವ ಸಂದರ್ಭದಲ್ಲಿ ನಮ್ಮ ಫಿರ್ಯಾದಿ ಸಂಸ್ಥೆಯಲ್ಲಿ ಪಿಗ್ಮಿ ಸಂಗ್ರಹಕರಾಗಿದ್ದರು. ನಾವು ಸಾಲವನ್ನು ಬಟವಡೆ ಮಾಡಿದ ನಂತರದಲ್ಲಿ ಪಿಗ್ಮಿ ಮುಖಾಂತರ ಸದ್ರಿ ಸಾಲದ ಮರು ಪಾವತಿಯ ವ್ಯವಸ್ಥೆ ಇದೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಈ ಪ್ರಕರಣದ ಸಾಲಗಾರರು ಯಾವುದೇ ಪಿಗ್ಮಿ ಖಾತೆಯನ್ನು ಹೊಂದಿರುವುದಿಲ್ಲ. ಅವರು ಕಂತಿನ ಮುಖಾಂತರ ತುಂಬುತ್ತೇನೆ ಎಂದು ಹೇಳಿರುತ್ತಾರೆ ಎಂದು ನುಡಿಯುತ್ತಾರೆ.

2. ಈ ಪ್ರಕರಣದ ಸಾಲವನ್ನು ತೆಂಗಿನ ಕಾಯಿ ವ್ಯಾಪಾರದ ಉದ್ದೇಶಕ್ಕಾಗಿ ನೀಡಿದ್ದು ಸದ್ರಿ ಸಾಲಗಾರರು ಸಾಲದ ಹಣವನ್ನು ತೆಂಗಿನ ಕಾಯಿ ವ್ಯಾಪಾರದ ಉದ್ದೇಶಕ್ಕಾಗಿ ಉಪಯೋಗಿಸಿದ್ದಾರೆ ಎಂಬುದರ ಕುರಿತಾಗಿ ಯಾವುದೇ ದಾಖಲಾತಿ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದ ಸಾಲಗಾರರಿಗೆ ಸಾಲದ ಮರು ಪಾವತಿಗಾಗಿ ನಿಪಿ4 ನ್ನು ಕಳುಹಿಸುವ ಪೂರ್ವದಲ್ಲಿ ನಮ್ಮ ಫಿರ್ಯಾದಿ

ಸಂಸ್ಥೆಯಿಂದ ಲಿಖಿತ ನೋಟೀಸನ್ನು ನೀಡಿರುತ್ತೇವೆ. ಸಾಲಗಾರರು ಎರಡು ಕಂತುಗಳು ಕಟ್ ಬಾಕಿ ಯಾದ ಕೂಡಲೇ ನಾವು ಸಾಲದ ಮರು ಪಾವತಿಯ ನೋಟೀಸನ್ನು ನೀಡಿರುತ್ತೇವೆ.

**3.** ನಿಪಿ2 ರಲ್ಲಿ ನಮೂದಿಸಿದ ಹಣವನ್ನು ನಮಗೆ ಬರಲು ಬಾಕಿ ಇದೆ ಎಂಬ ಬಗ್ಗೆ ಯಾವುದೇ ದಾಖಲಾತಿಯನ್ನು ನೀಡಿರುವುದಿಲ್ಲ. ನಿಪಿ2 ರಲ್ಲಿ ನಮೂದಿಸಿದ ಮೊತ್ತದಲ್ಲಿ ಸಾಲದ ಬಡ್ಡಿ ಹಾಗೂ ದಂಡದ ಬಡ್ಡಿಯನ್ನು ಆಕರಿಸಿ ನಮೂದು ಮಾಡಲಾಗಿರುತ್ತದೆ. ಸಾಲವನ್ನು ಪಡೆದ ನಂತರದಲ್ಲಿ ಸಾಲಗಾರರಿಗೆ ತಿಂಗಳಿಗೆ ಎಷ್ಟು ಹಣದ ಕಂತು ಬರುತ್ತದೆ ಎಂಬ ಬಗ್ಗೆ ಯಾವುದೇ ಲಿಖಿತ ದಾಖಲಾತಿಯನ್ನು ನೀಡಿರುವುದಿಲ್ಲ. ಆದರೆ ನಾವು ಮೌಖಿಕವಾಗಿ ಹೇಳಿರುತ್ತೇವೆ. ಈ ಪ್ರಕರಣದ ಸಾಲದ ಹಣಕ್ಕೆ ತಿಂಗಳು ಕಂತು ರೂ. 6000/- ಬರುತ್ತದೆ. ನಿಪಿ2 ರಲ್ಲಿ ನಮೂದಿಸಿದ ಹಣವನ್ನು ಆರೋಪಿತನು ನಮ್ಮ ಫಿರ್ಯಾದಿ ಸಂಸ್ಥೆಗೆ ಬಂದು ಕೇಳಿ ನಮೂದಿಸಿರುತ್ತಾನೆ. ನಿಪಿ2 ರ ಸಹಿಯನ್ನು ಹೊರತುಪಡಿಸಿ ಅದರಲ್ಲಿ ಬರೆದಂತಹ ಅಕ್ಷರವು ಆರೋಪಿತನದ್ದು ಅಲ್ಲ ಎಂದರೆ ಸಾಕ್ಷಿಯು ಯಾರು ಬರೆದು ನೀಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ2 ರಲ್ಲಿ 1,60,0046-00 ರೂಪಾಯಿಯನ್ನು ನಾವೇ ಬರೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ 2 ರಲ್ಲಿ ನಮೂದಿಸಿದ ದಿನಾಂಕದಂದು ಆರೋಪಿತನು ರೂ.1600046-00 ಕಾನೂನು ಬದ್ದವಾಗಿ ಬರತಕ್ಕ ಹಣ ಆಗಿರುವುದಿಲ್ಲ ಎಂದರೆ ಸರಿಯಲ್ಲ. ರೂ. 1600046-00 ಆತನಿಂದ ಬರಲು ಬಾಕಿ ಇದೆ ಎಂಬ ಬಗ್ಗೆ ನ್ಯಾಯಾಲಯಕ್ಕೆ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿಪಿ2 ರಲ್ಲಿ ನಮೂದಿಸಿದ ಹಣವು ಆರೋಪಿತನು ನಮಗೆ ನೀಡಲು ಬಾಧ್ಯಸ್ಥನು ಅಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲ.**

**ಸಿ.ಸಿ.ನಂ.: 2241/2025**

ಪಿ.ಡಬ್ಲ್ಯೂ: 1

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆ.ಪ್ರ.ದ.ನ್ಯಾ.ದಂ. ಕುಮಟಾ